ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಹರಿಜನ ಗಿರಿಜನರಿಗೆ ಕೊಟ್ಟಿರುವ ದೋಣಿಗಳು ಏನಿವೆ ಅವುಗಳ ಬಗ್ಗೆ ಸರ್ಕಾರದ ವತಿಯಿಂದ ಎಷ್ಟು ಸಹಾಯಧನವನ್ನು ಕೊಟ್ಟಿದ್ದೀರಿ, ಬೇರೆ ಸವಲತ್ತುಗಳನ್ನು ಏನೇನು ಕೊಟ್ಟಿದ್ದೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ—ಎಷ್ಟು ದೋಣಿಗಳನ್ನು ಕೊಟ್ಟಿದೆ ಎಂಬ ಬಗ್ಗೆ ಲೆಕ್ಕ ಇದೆ. ಅದನ್ನು ಈಗಾಗಲೇ ಹೇಳಿದ್ದೇನೆ. ಈಗಾಗಲೇ ಸರ್ಕಾರದ ಕಡೆಯಿಂದ 605 ಬೋಟುಗಳನ್ನು ಕೊಟ್ಟಿದ್ದೇವೆ. 4ನೇ ಪಂಚವಾರ್ಷಿಕ ಯೋಜನೆಯಲ್ಲಿ 350 ಮೆಕನೈಜ್ಡ್ ಬೋಟುಗಳನ್ನು ಕೊಡಬೇಕೆಂದು ತೀರ್ಮಾನಮಾಡಿದ್ದೇವೆ. ನಬ್ಬಿಡಿಯನ್ನು ಶೇಕಡ 50 ರಷ್ಟು ಕೊಡುತ್ತಿದ್ದೇವೆ. ಇಂಜಿನ್ ಖರ್ಚಿನಲ್ಲಿ ಈಗ ಶೇಕಡ 25ರಷ್ಟು ಕಡಿಮೆಮಾಡಬೇಕೆಂದು ತೀರ್ಮಾನಮಾಡಿ 350 ಬೋಟ್‌ಗಳಿಗೆ ಬದಲು 700 ಬೋಟ್‌ಗಳನ್ನು ಸರ್ಕಾರದವರು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ರೋನ್ ಮುಖಾಂತರ ಈಗಾಗಲೇ 200 ಬೋಟ್‌ಗಳನ್ನು ಕೊಟ್ಟಿದ್ದೇವೆ. 4ನೇ ಪಂಚವಾರ್ಷಿಕಯೋಜನೆ ಮುಗಿಯುವುದರೊಳಗೆ ಒಂದು ಸಾವಿರ ಬೋಟ್‌ಗಳನ್ನು ಕೊಡಬೇಕೆಂದಿದ್ದೇವೆ.

ಶ್ರೀ ಎಂ. ಶ್ರೀನಿವಾಸ ನಾಯಕ್.—ಇಂಡಿಯಾ ಸರ್ಕಾರದಿಂದ ನಮಗೆ ಟ್ರಾಲರ್ಸ್‌ಗಳೇ ನಾದರೂ ಬಂದಿವೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎರಡು ಟ್ರಾಲರ್‌ಗಳನ್ನು ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆ. ಒಂದನ್ನು ಮುಂದಿನ ತಿಂಗಳು 10ನೇ ತಾರೀಖಿನಲ್ಲಿ ಗೋವಾ ಷಿಪ್ ಯಾರ್ಡ್‌ನಲ್ಲಿ ರ್ಯಾಂಡ್ ಮಾಡಬೇಕೆಂದಿದ್ದೇವೆ. 15 ಲಕ್ಷರೂಪಾಯಿಗಳ ಮೌಲ್ಯದ 2 ಟ್ರಾಲರ್ಸ್‌ಗಳನ್ನು ಉಪಯೋಗಿಸುವುದರಿಂದ ಡೀಪ್ ಸಿ ಫಿಷಿಂಗ್‌ಗೆ ಅನುಕೂಲವಾಗುತ್ತದೆ.

Smt. WINNIFRED F. FERNANDES.—You have said that you have given 125 boats for North Canara and 265 boats through Co-operative Societies and Fisheries Department in South Kanara. What is the time you have taken to supply them ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಮ್ಮ ಬೋಟ್ ಬಿಲ್ಡಿಂಗ್ ಯಾರ್ಡ್‌ನವರು ಅದನ್ನು 2-3 ವರ್ಷಗಳಿಂದ ಕೊಡುತ್ತಿದ್ದಾರೆ.

Mr. SPEAKER.—Question Nos. 116, 322 and 327 may be taken up together.

Implementation of Recommendations of Tukol Commission

116. Sri D. B. KALMANKAR (Aland).—

Will the Minister for Finance, Planning and Youth Welfare be pleased to state:—

the Recommendations of the Tukol Commission that have been approved by the Government and given effect to ?

Sri RAMAKRISHNA HEGDE (Minister for Finance, Planning and Youth Welfare).—

(1) The Recommendation in respect of D.A., C.C.A. and H.R.A. to Government Servants, Officials of Local Bodies and aided Institutions, has been accepted in Government Order No. FD 20 SRP (1) 69, dated 10th Mach 1969.

(2) Relief suggested to Pensioners has also been implemented with effect from 1st April 1969 in Government Order No. FD 24 SRP (1) 68, dated 1st April 1968.